27-7-64

— Registered No. B G 182 —

ಗೋರಕ್ಷಣ
GORAKSHANA

14 ನೇ ವರ್ಷ | 1964 ನೇ ಜುಲೈ ತಿಂಗಳು | July 1964

Help The ' Gorakshana '

.... ಪ್ರತಿ ತಿಂಗಳ ತಾ || 25 ರಂದು ಪ್ರಕಟಿಸಲ್ಪಡುವುದು ....

" ಗೋರಕ್ಷಣ " ಕ್ಕೆ ಬೆಂಬಲಿಗರಾಗಿರಿ

ಕನ್ನಡನಾಡಿನಲ್ಲಿ ಗೋರಕ್ಷಣೆ, ವ್ಯಾಪಾರದಯೆ, ಶಾಕಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಮಾಸಪತ್ರಿಕೆ.

' ಗೋರಕ್ಷಣ ' ಕ್ಕೆ ಸಹಾಯದ್ರವ್ಯವನ್ನೂ ಲೇಖನಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಾರ್ಷಿಕ ಚಂದಾ 50 ನ ಪೈ

ಅಭಿವಾಂಛಿಗಳು ರೂ 10 (ಒಂದೇ ಸಾರಿ) ಸಹಾಯಕರು ರೂ 25 (ಒಂದೇ ಸಾರಿ)

ವಿಳಾಸ– ಗೋರಕ್ಷಣ ಆಫೀಸು ಚಾಮರಾಪುರಂ, ಮೈಸೂರು 4

ಚಿಂತನಾಶಕ್ತಿ ಪ್ರಾಣಿಗಳಿಗೂ ಇದೆ

★

ವಾಷಿಂಗ್ಟನ್ (ಡಾಡ್)— ಪ್ರಾಣಿಗಳಿಗೆ ಆಲೋಚನಾ ಶಕ್ತಿಯುಂಟೇ ಎಂಬುದು ಸಾಮಾನ್ಯವಾಗಿ ಎಲ್ಲರ ಮನಸ್ಸಿನಲೂ ಏಳುವ ಪ್ರಶ್ನೆ ; ಮಾತೇ ಹೊರಡದ ಪ್ರಾಣಿಗಳಿಗೆ ಚಿಂತನಾಶಕ್ತಿ ಇರುವುದು ಸಾಧ್ಯವೇ ಇಲ್ಲ ಎಂದು ಹಲವರು ವಾದಿಸುವುದೂ ಉಂಟು ; ಫ್ರೀಬರ್ಗಿನ ಅಟೋ ಕೊಹ್ಲರ್ರು ಮತ್ತು ಮ್ಯೂನಸ್ಟರಿನ ಪ್ರೊ || ಬರ್ನಾರ್ಡು ರೆಸ್ಕ್ಯು ಫಂಬಿ ಬ್ಬರು ಪಶ್ಚಿಮ ಜರ್ಮನಿಯ ಪ್ರಾಣಿಶಾಸ್ತ್ರಜ್ಞರು ಈ ವಿಷಯವಾಗಿ ವಿಫುಲ ಪರಿಶೋಧನೆಗಳನ್ನು ನಡೆಸಿ, ಆಲೋಚನೆ ಮಾಡುವ ಶಕ್ತಿಯೂ ಪ್ರಾಣಿಗಳಿಗೂ ಇದೆಯೆಂದು ನಿರೂಪಿಸಿದ್ದಾರೆ ; ಮಾತನಾಡುವ ಮೊದಲು ನಾವು ಚಿಂತಿಸುವಂತೆಯೇ ಅವುಗಳೂ ಚಿಂತಿಸುವುವೆಂದೂ ಮಾತಿಗೆ ಬದಲು ಏನಾದರೊಂದು ರೀತಿಯಿಂದ ತನ್ನ ಅಭಿಪ್ರಾಯವನ್ನು ಪ್ರಾಣಿಯು ಪ್ರಕ್ಟಪಡಿಸುವುದೆಂದೂ ಅವರು ತಿಳಿಸಿದ್ದಾರೆ.

ಅವರು ಪಾರಿವಾಳ, ಗಿಡಗ ಮುಂತಾ ಮುಂತಾದ ಹಕ್ಕಿಗಳಿಗೆ ಸಂಖ್ಯಾ ಜ್ಞಾನವನ್ನುಂಟುಮಾಡಲು ಯತ್ನಿಸಿದರು : ಅಂಕಿಗಳನ್ನು ಕೂಡುವಿಕೆಯೆಂದರೆ ಅವು ನಮ್ಮಂತೆಯಲ್ಲದಿದ್ದರೂ, ಅದಕ್ಕೆ ತಮ್ಮದೇ ಆದ ಮಾರ್ಗಗಳನ್ನು ಹೊಂದಿವೆ : ಈ ಪ್ರಯೋಗಗಳನ್ನೆಲ್ಲಾ ಚಿತ್ರೀಕರಿಸಿಕೊಳ್ಳಲಾಗಿತ್ತು : ಪ್ರಾಣಿಶಾಸ್ತ್ರಜ್ಞರ ಸಮ್ಮೇಳನದಲ್ಲಿ ಈ ಚಿತ್ರವನ್ನು ಪ್ರದರ್ಶಿಸಿದಾಗ ಅಲ್ಲಿ ನೆರೆದಿದ್ದವರೆಲ್ಲಾ ಚಕಿತರಾಗಿ ಹೋದರು. (ಯು ಪಿ ಎಸ್)

★

ಸೂಚನೆ

ಅನಿವಾರ್ಯ ನಿಮಿತ್ತ ನಾಳೆ ಸತ್ಯವಾದೆ ಪತ್ರಿಕೆಯು ಪ್ರಕಟಿಸಲ್ಪಡುವುದಿಲ್ಲ.

ನಾಡಿದ್ದಿನ ಪತ್ರಿಕೆ 4 ಪುಟಗಳುಳ್ಳ ದ್ದಾಗಿರುತ್ತದೆ.

ಪಶು-ಪಾಲನೆ

ಪಶುಪಾಲನಾ ಸಂಶೋಧನಾ ಮಂಡಲಿಯ (ಪುನರ್ರಚಿತ) ಪ್ರಥಮ ಸಭೆಯನ್ನು ಉದ್ಘೋಷಿಸಿ ಕೇಂದ್ರ ಕೃಷಿ ಸಂಶೋಧನಾ ಪರಿಷತ್ತಿನ ಉಪಾಧ್ಯಕ್ಷರಾದ ಶ್ರೀ ಎ ಡಿ ಪಂಡಿತರು ಮಾತನಾಡಿ ಭಾರತ ಪಶುಸಂಪತ್ತನ್ನು ವೈಜ್ಞಾನಿಕ ಸಂಶೋಧನೆಗಳ ಮೂಲಕ ಬೆಳೆಸುವುದಕ್ಕೆ ಗಮನಕೊಡುವುದು ತುಂಬಾ ಅವಶ್ಯಕವಾದಗಿದೆಯೆಂದೂ ತಿಳಿಸಿದರು ; ನಮ್ಮ ದೇಶದಲ್ಲಿ ಪುಷ್ಟಿಕರ ಆಹಾರದ ಕೊಂತೆ ತೀವ್ರವಾಗಿರುವುದೆಂದೂ ಅರ್ಧದಷ್ಟು ಜನ ಪುಷ್ಟಿಕರವಲ್ಲದ ಆಹಾರವನ್ನು ಸೇವಿಸಬದುಕುತ್ತಿರುವರೆಂದೂ ಅವರು ತಿಳಿಸಿದರು.

★

ಅಹಿಂಸೆ

ಅಹಿಂಸೆಗೆ ಸಮಾನವಾದ ತಪಸ್ಸು ಬೇರೊಂದಿಲ್ಲ ; ಅಹಿಂಸೆಯೇ ಮಾನವ ಪ್ರೇಮವನ್ನು ಅಭಿವೃದ್ಧಿಗೊಳಿಸಿಕೊಂಡು ಅಹಿಂಸೆಯನ್ನು ಸಾಧಿಸುವುದು ಪ್ರತಿ ಮಾನವನ ಕರ್ತವ್ಯವಾಗಿದೆ.

ಮಾನವನಿಗೆ ಪ್ರೋತ್ಸಾಹವನ್ನೂ ಮತ್ತು ಉತ್ಸಾಹವನ್ನೂ ಉಂಟು ಮಾಡುವುದು ಅಹಿಂಸೆ.

ಒಳ್ಳೆಯ ಹೆಸರು ಕೀರ್ತಿ ಮತ್ತು ಧನವನ್ನು ಸಂಪಾದಿಸಬೇಕೆಂಬ ಅಭಿಲಾಷೆಯುಳ್ಳವರು ಆ ಫಲಪ್ರಾಪ್ತಿಗಾಗಿ ಅಹಿಂಸೆಯನ್ನು ಪಾಲಿಸಬೇಕು. (ಉ. ಕ)

ದಿವ್ಯವಾಣಿ

ಬಯಕೆ ಅಥವಾ ಕಾಮವನ್ನು ಅವುಗಳ ಪರಮಾವಧಿಯಷ್ಟರ ಭೋಗದಿಂದ ತಣಿಸಲು ಸಾಧ್ಯವಿಲ್ಲ.

— ಶ್ರೀ ಶ್ರೀಂಗೇರಿ ಜಗದ್ಗುರುಗಳು

ರಕ್ತಪರಿಚಲನೆಗೆ ಹೆಚ್ಚು ಹಾಲನ್ನು ಸೇವಿಸಿರಿ

❋

ಕೀಲ್ (ಡಾಡ್)— ಹಾಲು ಮತ್ತು ಹಾಲಿನಿಂದ ತಯಾರಾದ ವಸ್ತುಗಳು ಕೇವಲ ಮಕ್ಕಳಿಗಷ್ಟೇ ಅಲ್ಲದೆ ದೊಡ್ಡವರಿಗೂ ಶರೀರ ಬೆಳವಣಿಗೆಯ ವಿಷಯದಲ್ಲಿ ಅತ್ಯಂತ ಸಹಕಾರಿಯಾದುದೆಂದು ಸರ್ವರಿಗೂ ಸರ್ವರಿಗೂ ವಿದಿತವಾದ ವಿಷಯವೇ.

ಈಜಿಗೆ ಬಾಲ್ಟಿಕ್ ಸಮುದ್ರ ತೀರದಲ್ಲಿರುವ ಕೀಲ್ ನಗರದಲ್ಲಿ ಹದಿನೇಳು ದೇಶಗಳಿಗೆ ಸೇರಿದ ಸುಮಾರು ಒಂದು ಸಾವಿರ ಪ್ರತಿನಿಧಿಗಳು ಸಮಾವೇಶಗೊಂಡು ಜೀವನದಲ್ಲಿ ಹಾಲಿಗಿರುವ ಪ್ರಾಧಾನ್ಯತೆ ಹಾಗೂ ಡೈರಿಗಳನ್ನು ಸ್ಥಾಪಿಸುವ ಔಚಿತ್ಯದ ಬಗ್ಗೆ ಒಂದು ವಾರದ ಪರ್ಯಂತರ ದೀರ್ಘವಾಗಿ ಚರ್ಚಿಸಿದರು ; ಒಂದೊಂದು ದೇಶದ ಅನುಭವವನ್ನೂ ಪರಿಶೀಲಿಸಲಾಯಿತು.

ಹಾಲಿನ ಡೈರಿಗಳ ವಿಷಯವಾದಲ್ಲಿ ಇಡೀಯ ಯೂರೋಪಿನಲ್ಲಿ ಜರ್ಮನಿಯಲ್ಲಿರುವ ಕೀಲ್ ನಗರಕ್ಕೆ ಪ್ರಮುಖವಾದ ದೊಡ್ಡ ಸ್ಥಾನವಿದೆ : ಅಂತೆಯೇ ಇನ್ನುಮೇಲೆ ಪ್ರತಿ ಎರಡು ವರ್ಷಗಳಿಗೊಮ್ಮೆ ಹಾಲಿನ ವಾರಗಳನ್ನು ಆಚರಿಸಲಾಗುವುದು.

ಹಾಲಿನಲ್ಲಿ ಉಳಿತಾಯ, ಭೂಮಿಹೀನ ರೈತಾ ಪ್ರದೇಶದಲ್ಲಿ ಡೈರಿಉದ್ಯಮ, ಬೆಳೆದವರಿಗೆ ಮುಖ್ಯ ಆಹಾರವಾಗಿ ಹಾಲು, ಹಾಲು ಮತ್ತು ಹಾಲಿನಿಂದ ತಯಾರಾದ ಪದಾರ್ಥಗಳ ಗುಣವನ್ನು ಉತ್ತಮಗೊಳಿಸುವಿಕೆ; ಮುಂತಾದ ಮುಖ್ಯ ವಿಷಯಗಳನ್ನು ಈ ಸಮ್ಮೇಳನದಲ್ಲಿ ಚರ್ಚಿಸಲಾಯಿತು.

ಹಾಲಿನಲ್ಲಿರುವ ಕೊಬ್ಬಿನಿಂದ ರಕ್ತನಾಳಗಳಲ್ಲಿ ದೋಷಗಳು ತಲೆದೋರುವುದೆಂದು ಪಾದವನ್ನು ನಿರಾಧಾರವೆಂದು ಕೀಲ್ ಸಂಶೋಧನಾ ಸಂಸ್ಥೆಗೆ ಸೇರಿದ ವೈ || ಲೆವಿಕೆಯವರು ತಿಳಿಸಿದರು : ಅಧಿಕ ಕ್ಷೀರ ಸೇವನೆಯಿಂದ ರಕ್ತಪರಿಚಲನೆಯು ಉತ್ತಮಗೊಳ್ಳುವುದೆಂದು ತಮ್ಮ ಸಂಶೋಧನೆಗಳ ಫಲಿತಾಂಶದಿಂದ ಅವರು ಸಮರ್ಥಿಸಿದರು : ದಿನವೂ ಹಾಲನ್ನು ಸೇವಿಸುವುದರಿಂದ, ರಕ್ತಸಂಬಂಧವಾದ ರೋಗಗಳೇ ದೂರಾಗುವುದೆಂದೂ ಅವರು ಶ್ರುತಪಡಿಸಿದರು. (ಯೂ ಪಿ ಎಸ್)

❋

ಪ್ರಾಣಿದಯಾ

ಫ್ರಾನ್ಸಿನಲ್ಲಿ ಪಾರಿವಾಳಗಳ ಮೇಲೆ ಗುಂಡುಹಾರಿಸಿ ಕೊಲ್ಲುವುದು ನಿಷೇಧಿಸಲಾಗಿದೆ.

❋

ಹಿತೋಪದೇಶ

ಇತರರಿಗೆ ಕೇಡು ಮಾಡಬಾರದು ; ಆದರೆ ನಿನ್ನ ಧರ್ಮ, ಜಾತಿ ಹಾಗೂ ಮರ್ಯಾದೆಗೆ ಯಾರಾದರೂ ಕುಂದುಂಟು ಮಾಡುತ್ತಿದ್ದಲ್ಲಿ ಅವಶ್ಯವಾಗಿ ಧರ್ಮಸಂಗತವಾದ ಯಾವುದೇ ಉಪಾಯದಿಂದ ಅವನನ್ನು ಸನ್ಮಾರ್ಗಕ್ಕೆ ತರಲು ಪ್ರಯತ್ನಿಸಬೇಕು. — ಶ್ರೀ ದ್ವಾರಕಾ ಜಗದ್ಗುರುಗಳು

★

ಧರ್ಮಬೋಧೆ

ಗೋವು ಸರ್ವದೇವಾತ್ಮಕವಾದದ್ದು ; ಅದರ ಸಮೃದ್ಧಿಯಿಂದಲೇ ಪಂಚಪಶು ವೃದ್ಧಿಯಾಗುತ್ತದೆ.

ಶಾಸ್ತ್ರಧರ್ಮ ಪ್ರಚಾರ ಸಭೆ
ಹೊಂಗನೂರು

★

ಮದ್ಯಪಾನ

ಮದ್ಯಪಾನದಿಂದ ಧರ್ಮಾರ್ಥಗಳೆರಡನ್ನೂ ಕೆಡಿಸುಕೊಂಡಂತಾಯ್ತು. — ಶಿವಪುರಾಣ

ಆದರ್ಶ ತ್ಯಾಗಿ ದಿಲೀಪ

(ಹಿಂದಿ ಗೋ ಅಂಕದಿಂದ ಅನುವಾದ .... ಪಿ ಎಸ್. ವಿಶ್ವನಾಥ್)

(ಮುಂದುವರಿದುದು)

ಅಲ್ಲಿನ ತಂಗಾಳಿ, ಆ ಮಂಜಿನ ಹನಿಗಳಿಂದ ಸೊಂಪಾಗಿ ಬೆಳೆದಿರುವ ಹಚ್ಚ ನೆಯ ಹುಲ್ಲು ಮತ್ತು ಆ ಪರ್ವತದ ಸುಂದರವಾದ ವನಸ್ಥಿಗೆ ಉಲ್ಲಾಸ ತರುವ, ಕಣ್ಣಿಗೆ ತಂಪನ್ನುಂಟುಮಾಡುವ ಆ ಅದ್ಭುತ ದೃಶ್ಯಗಳನ್ನು ನೋಡುವುದರಲ್ಲಿ ತಲ್ಲೀನನಾಗಿದ್ದನು ; ಇಂತಹ ವಾತಾವರಣದಲ್ಲೆ ನಂದಿನಿಯ ಮೇಲೆ ಒಂದು ಸಿಂಹವು ಹಾರಿ ಅದನ್ನು ಕೆಳಕ್ಕುರುಳಿಸಿತು. ಇದು ರಾಜನಿಗೆ ತಿಳಿಯಲಿಲ್ಲ : ನಂದಿನಿಯ ಆರ್ತಧ್ವನಿ ಬಂದಾಗಲೇ ರಾಜನಿಗೆ ಅರಿವಾದುದು ; ರಾಜನು ಕೂಡಲೇ ತನ್ನ ಬತ್ತಳಿಕೆಗೆ ಕೈಹಾಕಿ ಬಾಣವನ್ನು ತೆಗೆದು ಬಿಲ್ಲಿಗೆ ಹೂಡಿ ಸಿಂಹಕ್ಕೆ ಗುರಿಯಿಟ್ಟು ಹೊಡೆಯಲು ಅನುವಾದನು ; ಆದರೆ ರಾಜನ ಕೈ ಸ್ವಾಧೀನ ತಪ್ಪಿತು ; ರಾಜನಿಗೆ ಆಶ್ಚರ್ಯವಾಯಿತು, ಭೀತಿ ಹುಟ್ಟಿತು ; ಇದೆಲ್ಲವೂ ಆ ಸಿಂಹದ ಪ್ರಭಾವವಿರಬೇಕೆಂದು ಊಹಿಸಿ, ಬಿಲ್ಲನ್ನು ಕೆಳಗಿಳಿಸಿದನು ; ಅಷ್ಟರಲ್ಲಿ ಸಿಂಹವು ರಾಜನನ್ನು ನೋಡಿ ಮುಗುಳುನಗೆ ನಕ್ಕು ' ಎಲೈ ರಾಜ, ನಾನು ಸಾಧಾರಣ ಸಿಂಹವಲ್ಲ. ಈ ನಿನ್ನ ಬಾಣಗಳು ನನ್ನನ್ನೇನೂ ಮಾಡಲಾರವು : ನಾನು ಶಂಕರನ ಪಂಕರನಾದ ಕುಂಭೋದರನು : ಇನ್ನು ಈ ಪ್ರಯತ್ನವನ್ನು ಬಿಟ್ಟು ಅರಮನೆಗೆ ಹಿಂದಿರುಗು ; ನೀನು ಕ್ಷತ್ರಿಯ ವಂಶದಲ್ಲಿ ಹುಟ್ಟಿದವ ನಿನ್ನ ಕರ್ತವ್ಯವನ್ನು ನೀನು ಪಾಲಿಸುವೆ, ಮತ್ತು ಯಾವ ಪ್ರಾಣಿಯನ್ನು ಶಸ್ತ್ರಗಳಿಂದ ರಕ್ಷಿಸಲು ಸಾಧ್ಯವಿಲ್ಲವೋ ಅದನ್ನು ನೀನು ರಕ್ಷಿಸಲು ಅಗದಿಹೋದುದು ನಾಚಿಕೆಯ ಮಾತೇನೂ ಅಲ್ಲ, ಎಂದಿತು.

ಇತ್ತ ರಾಜನ ಅಂತಃಕರಣದಲ್ಲಿ ಸಂಶಯ, ಶ್ರದ್ಧೆ ಅಶಾನಿರಾತಂಕಗಳ ಕಾಳಗವು ಎದ್ದಿತು ; ರಾಜನು ತನ್ನ ಪ್ರಯತ್ನದಲ್ಲಿ ಅಸಮರ್ಥನಾಗಿ; ಅತಿ ವಿನಯದಿಂದ ನಂದಿನಿಯನ್ನು ಬಿಡುಗಡೆ ಮಾಡಬೇಕೆಂದು ಸಿಂಹದ ಬಳಿ ಬೇಡಿಕೊಳ್ಳಲು ಸಿಂಹವು ಅದು ಅಸಾಧ್ಯವೆಂದು ಹೇಳಲು, ರಾಜನು ತನ್ನ ಪ್ರಾಣವನ್ನು ತೆಗೆದು ಅದನ್ನು ಉಳಿಸಬೇಕೆಂದೂ ಸಿಂಹವು ತನ್ನನ್ನು ತಿಂದು ಹಸಿವನ್ನು ಹೋಗಲಾಡಿಸಿಕೊಳ್ಳಬಹುದೆಂದೂ ಮತ್ತೂ ವಿನಂತಿಸಿದನು.

ಆಗ ಸಿಂಹವು ರಾಜನನ್ನು ಉತ್ತೇಜಿಸುತ್ತಾ ಇಂತೆಂದಿತು— ಹಾಗೆ ನೀನು ಭೂತದಯಾಪಂನಾಗಿರುವಲ್ಲಿ ಈ ಒಂದು ಹಸುವನ್ನು ಉಳಿಸುವ ಸಲುವಾಗಿ ನಿನ್ನ ಪ್ರಾಣವನ್ನು ತ್ಯಜಿಸಬಹುದು : ಆದರೆ. ನೀನು ಜೀವಂತದಲ್ಲಿದ್ದರೆ, ಹೇ, ಪ್ರಜೆಗಳ ಬಂಧೋ! ನೀನು ಇಡೀ ಪ್ರಜೆಗಳಿಗೆ ತಂದೆಯುಂತಿದ್ದ ಅವಂಕಷ್ಟಗಳನ್ನು ಹೋಗಲಾಡಿಸಬಹುದು, ಮತ್ತು ಈ ನಂದಿನಿಯ ಬಗ್ಗೆ ನಿನ್ನ ಗುರುಗಳು ಕೋಪಗೊಳ್ಳುವುದಾದರೆ ಅವರಿಗೆ ಇದರಂತಹ ಸಾವಿರಾರು ಹಸುಗಳನ್ನು ಕೊಟ್ಟು ಶಾಂತಿಸಬಹುದು ಅದಕ್ಕೆ ರಾಜನು— ಎಲೈ ಮೃಗೇಂದ್ರ, ನಾನು ಕ್ಷತ್ರಿಯ ವಂಶಜನು, ಆದರೂ ನಿನ್ನ ಪ್ರಭಾವದಿಂದ ನನ್ನ ಕ್ಷತ್ರಿಯತ್ವವು ಕಳೆಚಿಬೀಳುತ್ತಿದೆ ; ನಾನು ನನ್ನ ಗುರುವಿನ ಆಜ್ಞೆಯನ್ನು ಪಾಲಿಸಬೇಕು ; ನೀನು ನಿನ್ನ ಒಡೆಯನ ಆಜ್ಞೆಯನ್ನು ಸಾರವಾಗಿ ಹೇಗೆ ಇಲ್ಲಿ ಕಾದಿಂವೆಯೋ ಹಾಗೆಯೇ ನಾನೂ ನನ್ನ ಕರ್ತವ್ಯವನ್ನು ಮಾಡಬೇಕಾಗಿದೆ : ಈಗಾಗಲೇ ಸಂಜೆಯಾಗುತ್ತಾ ಬಂದಿತು ; ಇದರ ಮಗು ದಾರಿಯನ್ನು ನೋಡುತ್ತಿರುತ್ತದೆ : ಹಾಗೆ ಬಿಡಲು ನಿನಗೆ ಇಷ್ಟವಿಲ್ಲದಿದ್ದರೆ ನನ್ನ ಮೇಲೆ ಕೃಪೆಮಾಡಿ ನನ್ನ ಈ ಬಿಸಿ ರಕ್ತವನ್ನು ಕುಡಿದು, ಆ ಮೂಕ ಪಶುವನ್ನು ಬಿಟ್ಟುಬಿಡು ಎನ್ನುತ್ತಾ ತಲೆಯನ್ನು ತಗ್ಗಿಸಿ ಅದರ ಕಾಲು ಬಳಿ ನಿಂತನು.

ಈ ಮಾತಗಳು ಸಿಂಹದ ಮೇಲೆ ಪೆಟ್ಟು ಮೂಡಿದವು ; ಸ್ವಲ್ಪ ಹೊತ್ತಿನಲ್ಲಿಯೇ ರಾಜನ ಶಿರದ ಮೇಲೆ ಪುಷ್ಪವೃಷ್ಟಿಯಾಯಿತು ; ವತ್ಸಾ ಎನ್ನುವ ಪ್ರೀತಿಯ ಧ್ವನಿ ಕೇಳಿಬಂದಿತು : ರಾಜನು ತಲೆಯೆತ್ತಿ ನೋಡಲು ನಂದಿನಿಯು ಸವಿಾಪದಲ್ಲಿ ಯಾರೂ ಇಲ್ಲ ! ಸಿಂಹವು ಅದೃಶ್ಯವಾಗಿದ್ದಿತು !

ರಾಜನನ್ನು ನೋಡಿ ನಂದಿನಿಯು ' ಎಲೈ ರಾಜ, ನಿನ್ನ ಭಕ್ತಿಗೆ ಮೆಚ್ಚಿದೆನು : ನಿನ್ನನ್ನು ಪರೀಕ್ಷಿಸುವುದಕ್ಕೊಸ್ಕರ ಈ ನಾಟಕವನ್ನು ಆಡಿದೆನು : ನಿನಗೆ ಶುಭವಾಗಲಿ : ನಿನಗೆ ಒರ್ವ ಪುತ್ರನು ಜನಿಸುವನು ' ಎಂದು ಆಶೀರ್ವದಿಸಿತು.

ಕೆಲ ದಿನಗಳಲ್ಲಿಯೇ ಸುದಕ್ಷಿಣೆಯು ಗರ್ಭವತಿಯಾಗಿ ಮುಂಗಳ ಮುಹೂರ್ತದಲ್ಲಿ ಒಂದು ಗಂಡು ಮಗುವಿಗೆ ಜನ್ಮವಿತ್ತಳು : ಆ ಮಗುವಿಗೆ ' ರಘು ' ಎಂಬ ನಾಮಕರಣವಾಯಿತು : ರಘು ದಿನೇದಿನೇ ಬೆಳೆದು ತಂದೆತಾಯಿಗಳ ಪ್ರೀತಿಗೆ ಪಾತ್ರನಾದನು

— ' ಗೋರಕ್ಷಣ ' ವ್ಯವಸ್ಥಾಪಕರ ವಿನಂತಿ —

ಗೋರಕ್ಷಣಕ್ಕೆ ಚಂದಾ ಸಹಾಯದ್ರವ್ಯ ಮುಂತಾದ್ದನ್ನು ಸ್ವೀಕರಿಸುವವರು :

ಡಾ|| ಪಿ ಎಸ್ ನಾರಾಯಣ್, ಶ್ರೀ ಪಿ ಎಸ್ ವಿಶ್ವನಾಥ್ ಜಯನಗರ, ಬೆಂಗಳೂರು

ಶ್ರೀ ಬಿ ಡಿ ಶಾಸ್ತ್ರಿಗಳು (ದ ರೈಲ್ವೆ) ವಿದ್ಯಾರಣ್ಯಪುರಂ, ಮೈಸೂರು

ಗೋರಕ್ಷಣ ಆಫೀಸು, ಸತ್ಯವಾದಿ ಪ್ರೆಸ್, ಚಾಮರಾಜಪುರಂ, ಮೈಸೂರು

ಶ್ರೀ ಅನಂತ ನರಸಿಂಹಯ್ಯಂಗಾರ್, ಶಾಸ್ತ್ರಧರ್ಮ ಪ್ರಚಾರ ಸಭಾ, ಹೊಂಗನೂರು

ಚಂದಾ ವಾಯಿದೆ ಮುಗಿದಿರುವವರು ದಯವಾಡಿ ಮುಂದಿನ ತಿಂಗಳು ತಾ|| 15 ರೊಳಗೆ ಪಾವತಿಮಾಡಬೇಕಾಗಿ ವಿನಂತಿ ; ಅಭಿಮಾನಿಗಳೂ, ಸಹಾಯಕರೂ ಆಗಿ ಹೆಚ್ಚೆಚ್ಚು ಮಂದಿ ನೆರವು ನೀಡಿ ಈ ಪವಿತ್ರ ಕಾರ್ಯವು ಹೆಚ್ಚೆಚ್ಚು ಪ್ರಚಾರವಾಗಲೂ ಸಹಕರಿಸಬೇಕೆಂದು ವಿನಂತಿ ; ಇವಂ ಹೆಸರು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು

ಶಾಸ್ತ್ರೀಯ ಆಯುರ್ವೇದ ಔಷಧಗಳು ದೊರೆಯುತ್ತವೆ ಮತ್ತು ಎಲ್ಲಾ ಖಾಯಿಲೆಗಳಿಗೂ ಚಿಕಿತ್ಸೆ ಮಾಡಲಾಗುತ್ತದೆ

ಆಯುರ್ವೇದ ಶಿರೋಮಣಿ ಡಾ || ಪಿ ಎಸ್ ನಾರಾಯಣ್

ಗೋಸೇವಕರು, ಪ್ರಾಣಿದಯಾ ಪ್ರಚಾರಕರು,

5 ನೇ ಬ್ಲಾಕು, ಜಯನಗರ, ಬೆಂಗಳೂರು 11

ವುಡ್‌ಲಾಂಡ್ಸ್ ಜನಭರಿತ 2 ನೇ ವಾರ

ತುಂಬಿತುಳುಕುವ ಪ್ರೇಕ್ಷಕವೃಂದಕ್ಕೆ ಪ್ರದರ್ಶಿತವಾಗುತ್ತಿದೆ

ಷಿಕಾರಿ ★ SHIKARI

ಆಪೆರಾ— ಅಮೋಘ 2 ನೇ ವಾರ

ಕಿಕ್ಕಿರಿದ ಜನಸಂದಣಿಗೆ ಪ್ರದರ್ಶಿತವಾಗುತ್ತಿದೆ

ತುಂಬಿದ ಕೊಡ



ಗೋರಕ್ಷಣೆ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

Edited, Printed & Published by the Proprietor Dharma Prachara Nirata M. S. Krishna Rao at the Satyavadi Press, Chamarajapuram, Mysore 4